**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ DETER ಸಮಿತಿ (WDC) ವಾರ್ಡ್ ಸಂಖ್ಯೆ: 116 ನೀಲಸಂದ್ರ ವಾರ್ಡಿನ ದಿನಾಂಕ: 12-05-2021 ರಂದು ನಡೆದ ಸಭೆಯ ನಡವಳಿಗಳು**

ವಿಷಯ: ವಾರ್ಡ್ ಸಂಖ್ಯೆ 116 ನೀಲಸಂದ್ರ ವಾರ್ಡ್ DETER ಸಮಿತಿ (WDC) ಸಭೆಯ ನಡವಳಿ.

ಉಲ್ಲೇಖ: 1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ.RD 158 TNR 2020. ದಿನಾಂಕ: 07-05-2021.

2. ಆಯುಕ್ತರ ಆದೇಶ ಸಂಖ್ಯೆ:ಬಿ12(ಕೋ-19)ಪಾರ್/04/21-22.
3. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಪರಿಷ್ಕೃತ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/20-21 ದಿನಾಂಕ: 16-04-2021.
4. ಸಭೆ ಸೂಚನಾ ಪತ್ರದ ದಿನಾಂಕ: 12.05.2021.

* * * * *

ಉಲ್ಲೇಖ (1) ರಿಂದ (4)ರ ಅನುಸಾರ ಮೇಲ್ಕಂಡ ಆದೇಶದಲ್ಲಿನ ಅಂಶಗಳನ್ನು ಪರಿಶೀಲಿಸಲು ದಿನಾಂಕ: 12-05-2021 ರಂದು 116 ನೀಲಸಂದ್ರ ವಾರ್ಡ್‌ಗೆ ಸಂಬಂಧಿಸಿದಂತೆ, ಲಕ್ಷಣ್‌ರಾವ್ ನಗರ, ವಾರ್ಡ್ ಸಂಖ್ಯೆ 116 ನೀಲಸಂದ್ರ ವಾರ್ಡ್ ಕಛೇರಿಯಲ್ಲಿ, ಬೆಳಗ್ಗೆ 11.00 ಗಂಟೆಗೆ ನಡೆದ ಸಭೆಯ ನಡುವಳಿ.

ಸಭೆಗೆ ಹಾಜರಿದ್ದವರು

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರು ಹಾಜರಾತಿ ಪಟ್ಟಿಯನ್ನು ಅನುಬಂಧ (1) ರಲ್ಲಿ ಲಗತ್ತಿಸಲಾಗಿದೆ.

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಡಾ॥ ಸಂಘಮಿತ್ರ, ಶಾಂತಿನಗರ ವಿಧಾನಸಭಾ ವ್ಯಾಪ್ತಿಯ ಡಿ.ಹೆಚ್.ಓ ಹಾಗೂ ವಾರ್ಡ್ ಸಂಖ್ಯೆ -116 (ನೀಲಸಂದ್ರ) ನೋಡಲ್ ಅಧಿಕಾರಿ ರವರು ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ DETER ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

ಮೇಲ್ಕಂಡ ಸ್ಥಳಗಳಲ್ಲಿ ಲಭ್ಯವಾಗುವ ಸೂಕ್ತ ಕಟ್ಟಡ ಒದಗಿಸಿಕೊಂಡು ಮೇಲ್ಕಂಡ ಎಲ್ಲಾ ವ್ಯವಸ್ಥೆಗಳನ್ನು ಕಲ್ಪಿಸಲು ಸಂಬಂಧಪಟ್ಟವರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

ಬಿಬಿಎಂಪಿ ಕೇಂದ್ರ ಕಛೇರಿಯಿಂದ ನೀಡಲ್ಪಡುವ ಸೂಚನೆಗಳು ಹಾಗೂ ಮಾರ್ಗ ಸೂಚಿಗಳು, ಸರ್ಕಾರಿ ಆದೇಶಗಳು, ವಲಯ ಕಛೇರಿಯ ಆದೇಶ ಅನುಸಾರ, ಆದ್ಯತೆ ಮೇಲೆ ಕ್ರಮವಿಡಲು ತೀರ್ಮಾನಿಸಲಾಯಿತು.

ಮೇಲ್ಕಂಡ ಎಲ್ಲಾ ಕ್ರಮಗಳನ್ನು ಸದ್ಯ ಜಾರಿಯಲ್ಲಿರುವ ಸರ್ಕಾರದ ಹಾಗೂ ಪಾಲಿಕೆಯ ಮಾರ್ಗಸೂಚಿ ಹಾಗೂ ನಿಯಮಾನುಸಾರ ಅನುಧಾನ ಲಭ್ಯತೆ ಹಾಗೂ ಕ್ರಿಯಾಯೋಜನೆಯ ಸಮುಚಿತ ಮಾರ್ಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಹಾಗೂ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲು ಸಂಬಂಧಪಟ್ಟವರಿಗೆ ಸೂಚಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ ಕೈಗೊಂಡು ಸಭೆಯಲ್ಲಿ ಮಂಡಿಸಲು ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

12.5.2021

ಕಾರ್ಯದರ್ಶಿಗಳು
ವಾರ್ಡ್ ನಂ.116

ನೋಡಲ್ ಅಧಿಕಾರಿಗಳು
ವಾರ್ಡ್ ನಂ.116 ಹಾಗೂ ಡಿ.ಹೆಚ್.ಒ
ಶಾಂತಿನಗರ ವಿಭಾಗ